ಹೀರೆಕಟ್ಟೆ ಒಡ್ಡುನಿಂದ ರೈತರಿಗೆ ನೀರು ಒದಗಿಸುವುದು

829 - ಶ್ರೀ ಮಲ್ಲಿಕಾರ್ಜುನ ಕೆ.ಬಿ. (ಬೀರೂರು) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಡೂರು ತಾಲ್ಲೂಕು ನಿಡಗಟ್ಟೆ ಪ್ರಾಂತ್ಯದ ಹಾಸನ ಜಿಲ್ಲೆ ನೇರಲಿಗೆ ಬಳಿ ಇರುವ "ಹಿರೇಕಟ್ಟೆ ಒಡ್ಡು" ನ ನೀರನ್ನು ಪಡೆಯದೆ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?*

ಆ) *ಹಿರೇಕಟ್ಟೆ ಒಡ್ಡಿನಿಂದ ನಿಡಗಟ್ಟೆಯಲ್ಲಿರುವ ಕಾಲುವೆ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?*

ಇ) *ಹಾಗಿದ್ದಲ್ಲಿ, ಈ ಕಾಲುವೆಯನ್ನು ಯಾವಾಗ ದುರಸ್ತಿ ಮಾಡಲಾಗುವುದು?*

ಶ್ರೀ ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಸರ್ಕಾರದ ಗಮನಕ್ಕೆ ಬಂದಿರುತ್ತದೆ. ನಾಲೆಯಲ್ಲಿ ಹೂಳು ತುಂಬಿದ್ದು, ಅಲ್ಲಲ್ಲಿ ಕೊರಕಲು ಉಂಟಾಗಿರುತ್ತದೆ.

ಇ) ಮುಂದಿನ ಸಾಲಿನ ಆರ್ಥಿಕ ಲಭ್ಯತೆಯನ್ನು ಪರಿಗಣಿಸಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗುವುದು.

ಸಚಿವರುಗಳ ಕಛೇರಿ ಹಾಗೂ ವಸತಿ ಗೃಹಗಳನ್ನು ನವೀಕರಿಸುವುದು

836 - ಶ್ರೀ ಮಲ್ಲಿಕಾರ್ಜುನ ಕೆ.ಬಿ. (ಬೀರೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ನೂತನ ಸರ್ಕಾರದ ಮಾನ್ಯ ಸಚಿವರುಗಳ ಕಛೇರಿ ಮತ್ತು ವಸತಿ ಗೃಹಗಳನ್ನು ನವೀಕರಿಸಲು ಹಾಗೂ ಪೀಠೋಪಕರಣಗಳು ಹಾಗೂ ಇತ್ಯಾದಿಗಳಿಗೆ ಇದುವರೆಗೆ ಎಷ್ಟು ವೆಚ್ಚ ಮಾಡಲಾಗಿದೆ?*

ಆ) *ಹಿಂದೆ ಸಚಿವರುಗಳಿಗೆ ಒದಗಿಸಿದ ಪೀಠೋಪಕರಣವನ್ನು (ಕಛೇರಿ ಮತ್ತು ವಸತಿ ಗೃಹ) ಏನು ಮಾಡಲಾಗಿದೆ? ವಿಲೇವಾರಿ ಮಾಡಿದ್ದರೆ ಅದರಲ್ಲಿ ಬಂದ ಹಣವೆಷ್ಟು? (ವಿವರ ಒದಗಿಸುವುದು)*

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಸಚಿವರುಗಳ ಕಛೇರಿ ಮತ್ತು ವಸತಿಗೃಹಗಳ ನವೀಕರಣ ಮತ್ತು ಪೀಠೋಪಕರಣ ಇತ್ಯಾದಿಗಳ ವೆಚ್ಚದ ವಿವರಗಳು ಈ ರೀತಿ ಇದೆ.

		ರೂ. ಪೈ.
1.	ಕಛೇರಿ ಪೀಠೋಪಕರಣ ವೆಚ್ಚ	44,60,023-00
2.	*ಸಚಿವರ ವಸತಿಗೃಹ :*	
	ನವೀಕರಣ ವೆಚ್ಚ (ಅಂದಾಜು ವೆಚ್ಚ)	77,13,000-00
	ಪೀಠೋಪಕರಣ, ಇತ್ಯಾದಿಗಳ ವೆಚ್ಚ (ಅಂದಾಜು ವೆಚ್ಚ)	80,28,000-00

ಅ) ಈ ಹಿಂದೆ ಸಚಿವರುಗಳ ಕಛೇರಿಗೆ ಒದಗಿಸಲಾಗಿದ್ದ ಪೀಠೋಪಕರಣಗಳಲ್ಲಿ ಉತ್ತಮವಾದ ಪೀಠೋಪಕರಣಗಳನ್ನು ಈಗಿನ ಸಚಿವರುಗಳ ಕಛೇರಿಗಳಿಗೆ ಒದಗಿಸಲಾಗಿದೆ. ಶಿಥಿಲಗೊಂಡ ಕೆಲವು ಪೀಠೋಪಕರಣಗಳನ್ನು ದುರಸ್ತಿಗೊಳಿಸಿ ಸಚಿವಾಲಯದ ಇಲಾಖೆಗಳಿಗೆ ವಿತರಿಸಲಾಗಿದೆ. ಸಚಿವರುಗಳ ಕಛೇರಿಯಿಂದ ವಾಪಸ್ಸು ಪಡೆದ ಯಾವುದೇ ಪೀಠೋಪಕರಣಗಳನ್ನು ಇದುವರೆವಿಗೂ ವಿಲೇವಾರಿ ಮಾಡಿರುವುದಿಲ್ಲ.

ಸಚಿವರುಗಳ ನಿವಾಸಗಳಿಗೆ ಒದಗಿಸಲಾಗಿದ್ದ ಪೀಠೋಪಕರಣಗಳಲ್ಲಿ ಬಹಳಷ್ಟು ವಸ್ತುಗಳನ್ನು ನವೀಕರಿಸಿ ಈಗಿನ ಸಚಿವರ ನಿವಾಸಗಳಿಗೆ ನೀಡಲಾಗಿದೆ. ಕೆಲವು ಪೀಠೋಪಕರಣಗಳನ್ನು ಪ್ರವಾಸಿ ಬಂಗಲೆ, ತಪಾಸಣೆ ಬಂಗಲೆ, ಸರ್ಕಾರಿ ಕಛೇರಿಗಳಿಗೆ ನೀಡಲಾಗಿದ್ದು, ಅವುಗಳಿಂದ ಬರಬೇಕಾಗಿರುವ ಮೊತ್ತವು ರೂ. 43,79,027-00. ಕೆಲವು ಅನುಪಯುಕ್ತ ಪೀಠೋಪಕರಣಗಳನ್ನು ಹರಾಜು ಮಾಡಲಾಗಿದ್ದು ಅವುಗಳಿಂದ ಬಂದಿರುವ ಮೊತ್ತವು ರೂ. 1,99,395-00. ಮಾಜಿ ಸಚಿವರುಗಳು ಕೆಲವು ವಸ್ತುಗಳನ್ನು ತೆಗೆದುಕೊಂಡು ಹೋಗಿದ್ದು, ಅದರ ಬಾಬ್ತು ರೂ. 34,76,558-00 ಗಳಾಗಿದ್ದು, ಇದರಲ್ಲಿ ರೂ. 4,45,913-00ಗಳು ಅವರಿಂದ ಪಾವತಿಸಲಾಗಿದೆ.

ಶಿವಾಜಿನಗರ ಕ್ಷೇತ್ರದಲ್ಲಿ ಕಳಪೆ ಗುಣಮಟ್ಟದ ಅಕ್ಕಿ ವಿತರಣೆ

843 - ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಬೆಂಗಳೂರಿನ ಶಿವಾಜಿನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಪಡಿತರ ಚೀಟಿಗಳ ಮೂಲಕ ಕಳಪೆ ಅಕ್ಕಿಯನ್ನು ವಿತರಣೆ ಮಾಡಿರುವ ದೂರುಗಳು ಸರ್ಕಾರದ ಗಮನಕ್ಕೆ ಬಂದಿವೆಯೇ?*
2. *ಹಾಗಿದ್ದಲ್ಲಿ, ಸರ್ಕಾರವು ಕೈಗೊಂಡ ಕ್ರಮಗಳೇನು?*

ಶ್ರೀ ಡಿ.ಬಿ. ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು) :

ಅ) ಶಿವಾಜಿನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ಪಡಿತರ ಅಂಗಡಿಗಳಲ್ಲಿ ಕಳಪೆ